# ‘ಆರೋಗ್ಯಕರ್ನಾಟಕ’

ಸರ್ಕಾರಿಆದೇಶ ಸಂಖ್ಯೆ: ಆಕುಕ 91 ಸಿಜಿಇ 2017, ದಿನಾಂಕ 1.3.2018

## ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು

| ಕ್ರಮ ಸಂಖ್ಯೆ | ಎಫ್.ಎ.ಕ್ಯೂ. | ಉತ್ತರ |
|---|---|---|
| 1 | “ಆರೋಗ್ಯಕರ್ನಾಟಕ” ಯೋಜನೆಎಂದರೇನು?ಯಾವಾಗಜಾರಿಗೆ ಬರುತ್ತದೆ? | ಆರೋಗ್ಯಕರ್ನಾಟಕಯೋಜನೆಯು ಸಾರ್ವತ್ರಿಕಆರೋಗ್ಯರಕ್ಷಣೆಯಾಗಿದ್ದು, ಪ್ರಾಥಮಿಕ, ನಿರ್ದಿಷ್ಟದ್ವಿತೀಯ ಹಾಗೂ ತೃತೀಯ ಹಂತದಚಿಕಿತ್ಸೆಯನ್ನುರಾಜ್ಯದಎಲ್ಲಾ ವರ್ಗದಜನತೆಗೆ ಭರವಸೆ ಮಾದರಿಯಲ್ಲಿ(Assurance mode)ಒದಗಿಸುವಯೋಜನೆಯಾಗಿರುತ್ತದೆ.ಈ ಯೋಜನೆಯನ್ನುಮಾರ್ಚ್–2018ರ ಮೊದಲನೇ ವಾರದಲ್ಲಿಚಾಲನೆ ನೀಡಲಾಗುತ್ತಿದ್ದು, ವರ್ಷದ ಅಂತ್ಯದೊಳಗೆ ರಾಜ್ಯಾದ್ಯಂತಹಂತ–ಹಂತವಾಗಿ ಅನುಷ್ಠಾನಿಸಲು ಉದ್ದೇಶಿಸಿದೆ. |
| 2 | ಯೋಜನೆಯಡಿಯಾರು ನೊಂದಯಿಸಿಕೊಳ್ಳಬಹುದು? | ಕರ್ನಾಟಕರಾಜ್ಯದಎಲ್ಲಾ ನಾಗರೀಕರಿಗೂ‘ಆರೋಗ್ಯಕರ್ನಾಟಕ’ಯೋಜನೆಯಡಿಆರೋಗ್ಯರಕ್ಷಣೆಕಲ್ಪಿಸಲು ಉದ್ದೇಶಿಸಿದೆ. ರಾಜ್ಯದಲ್ಲಿಯಾವುದೇ ಸರ್ಕಾರಿ ಹಾಗೂ ಖಾಸಗಿ ಆರೋಗ್ಯ ವಿಮೆ/ಇತರೆ ಯೋಜನೆಗಳಡಿ ನೊಂದಾವಣೆಗೊಳ್ಳದ ಎಲ್ಲಾ ನಾಗರೀಕರು ನೊಂದಾಯಿಸಿಕೊಳ್ಳಬಹುದು. |
| 3 | ಆರೋಗ್ಯಕರ್ನಾಟಕಯೋಜನೆಯಲ್ಲಿ ಫಲಾನುಭವಿಗಳು ಯಾವಾಗ ನೊಂದಾಯಿಸಿ ಕೊಳ್ಳಬಹುದು? | ತಪಾಸಣೆಅಥವಾಚಿಕಿತ್ಸೆಗಾಗಿ ಫಲಾನುಭವಿಗಳು ಹತ್ತಿರದ ಸರ್ಕಾರಿಆಸ್ಪತ್ರೆಗೆ ಭೇಟಿ ನೀಡುವ ಸಂದರ್ಭದಲ್ಲಿರೂ. 10.00 ಪಾವತಿ ಮಾಡಿ“ಆರೋಗ್ಯಕರ್ನಾಟಕ”ಯೋಜನೆಯಡಿ ನೊಂದಾಯಿಸಿಕೊಳ್ಳಬಹುದು.<br><br>ಕಾರ್ಡನ್ನು ಪಡೆಯುವಉದ್ದೇಶಕ್ಕಾಗಿ ಮಾತ್ರಅವರುಆಸ್ಪತ್ರೆಗೆ ಹೋಗುವ ಅಗತ್ಯವಿರುವುದಿಲ್ಲ. |
| 4 | ಆರೋಗ್ಯಕರ್ನಾಟಕಯೋಜನೆಯಡಿಎಲ್ಲಿ ನೊಂದಾಯಿಸಿಕೊಳ್ಳಬೇಕು? | ಸರ್ಕಾರಿ ಆಸ್ಪತ್ರೆಗಳಲ್ಲಿ/ಸಾರ್ವಜನಿಕಆರೋಗ್ಯ ಕೇಂದ್ರಗಳಲ್ಲಿ ಸ್ಥಾಪಿತಗೊಂಡಿರುವ ಹೊರರೋಗಿಕೌಂಟರ್/ನೊಂದಾವಣೆ ಕೌಂಟರ್‌ಗಳಲ್ಲಿ ಫಲಾನುಭವಿಗಳು ತಮ್ಮ ಅನುಕೂಲಕ್ಕೆ ಅನುಗುಣವಾಗಿನೊಂದಾವಣೆ ಮಾಡಿಸಿಕೊಳ್ಳಬಹುದು. |

| ಕ್ರಮಸಂಖ್ಯೆ | ಎಫ್.ಎ.ಕ್ಯೂ. | ಉತ್ತರ |
|---|---|---|

| | | |
|---|---|---|
| **5** | ತುರ್ತು ಸಂದರ್ಭದಲ್ಲಿ ನಾನು ಚಿಕಿತ್ಸೆಗಾಗಿ ಸಾರ್ವಜನಿಕಆರೋಗ್ಯ ಕೇಂದ್ರಗಳಿಗೆ ಹೋಗಿ ನೊಂದಾವಣೆಮಾಡಿಕೊಂಡು ನಂತರಚಿಕಿತ್ಸೆ ಪಡೆಯಬೇಕೇ? | ತುರ್ತು ಸಂದರ್ಭದಲ್ಲಿ ಫಲಾನುಭವಿಗಳು ಸರ್ಕಾರಿಆದೇಶದ ಅನುಬಂಧ-4ರಲ್ಲಿ ತಿಳಿಸಿದಂತೆ ತುರ್ತುಚಿಕಿತ್ಸಾ ವಿಧಾನಗಳಿಗಾಗಿ ಹತ್ತಿರದ ನೊಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ಪಟ್ಟಿ ಮಾಡಿದತುರ್ತು ಪರಿಸ್ಥಿತಿ ಕೋಡ್‌ಗಳ ಚಿಕಿತ್ಸೆಗಾಗಿ ಹೋಗಬಹುದು. |
| **6** | ಯೋಜನೆಯ ನೊಂದಾವಣೆಗಾಗಿ ಆಸ್ಪತ್ರೆಗಳಲ್ಲಿ ಯಾರನ್ನು ಸಂಪರ್ಕಿಸಬೇಕು? | ಸಿ.ಹೆಚ್.ಸಿ. ಹಾಗೂ ಮೇಲ್ಪಟ್ಟ ಸರ್ಕಾರಿ ಆಸ್ಪತ್ರೆಗಳಲ್ಲಿ ಗುಲಾಬಿ ಬಣ್ಣದಕಾಲರ್‌ನೊಂದಿಗೆ ಬಿಳಿ ಬಣ್ಣದಕೋಟ್ ಧರಿಸಿ ಸುವರ್ಣಆರೋಗ್ಯ ಸುರಕ್ಷಾಟ್ರಸ್ಟ್‌ನಕೌಂಟರ್‌ನಲ್ಲಿ ಕುಳಿತಿರುವ ಆರೋಗ್ಯಮಿತ್ರರನ್ನು ಸಂಪರ್ಕಿಸಬಹುದುಅಥವಾ ನೇರವಾಗಿಆರೋಗ್ಯಕರ್ನಾಟಕಯೋಜನೆಯ ನೊಂದಾವಣೆಕೌಂಟರ್‌ನ್ನು(OPD Registration Counter) ಸಂಪರ್ಕಿಸಬಹುದುಅಥವಾಯಾವುದೇ ಸಾರ್ವತ್ರಿಕಆರೋಗ್ಯ ಸಂಸ್ಥೆಗಳನ್ನು ಸಂಪರ್ಕಿಸಬಹುದು. |
| **7** | ಆರೋಗ್ಯಕರ್ನಾಟಕಯೋಜನೆಯಲ್ಲಿ ನೊಂದಾಯಿಸಿಕೊಳ್ಳಲು ಬೇಕಿರುವ ದಾಖಲಾತಿಗಳು ಯಾವುವು? | ಆರೋಗ್ಯಕರ್ನಾಟಕಯೋಜನೆಯಡಿ ನೊಂದಾಯಿಸಿಕೊಳ್ಳಲು ಫಲಾನುಭವಿಗಳು ಮೊದಲನೇ ಬಾರಿಗೆಆಧಾರ್ ಮತ್ತು ಪಡಿತರ ಚೀಟಿಗಳನ್ನು ತರತಕ್ಕದ್ದು.ಒಂದುವೇಳೆ ಆಧಾರ್‌ಕಾರ್ಡ್‌ಇಲ್ಲದಿದ್ದಲ್ಲಿಯೋಜನೆಯಲ್ಲಿಪಿಡಿಎಸ್‌ಅರ್ಹತಾಕಾರ್ಡ್‌ನಆಧಾರದ ಮೇಲೆ ಸೌಲಭ್ಯಗಳನ್ನು ಪಡೆಯಲು ಪಡಿತರಚೀಟಿಕಡ್ಡಾಯವಾಗಿರುತ್ತದೆ |
| **8** | ನನ್ನಲ್ಲಿಆಧಾರ್‌ಕಾರ್ಡುಇದ್ದು ಪಡಿತರಚೀಟಿಇಲ್ಲದಿದ್ದರೆ ? | ಅಂತಹಫಲಾನುಭವಿಗಳು ಖಂಡಿತವಾಗಿಯೂಈ ಯೋಜನೆಯಲ್ಲಿ ನೊಂದಾಯಿಸಿಕೊಳ್ಳಲು ಅವಕಾಶವಿರುತ್ತದೆ. ಅವರನ್ನು 'ಸಾಮಾನ್ಯರೋಗಿ' ಎಂದು ಪರಿಗಣಿಸಲಾಗುವುದು ಹಾಗೂ ಯೋಜನೆಯ ಸೌಲಭ್ಯಗಳನ್ನು ಸಾಮಾನ್ಯರೋಗಿಯಅರ್ಹತೆಯಂತೆ ಪಡೆಯುತ್ತಾರೆ, |
| **9** | ಒಂದು ವೇಳೆ ಪಿಡಿಎಸ್ 'ಅರ್ಹತಾ' ಕಾರ್ಡು ಹೊಂದಿದ್ದು, ಆಧಾರ್‌ಕಾರ್ಡ್‌ಇಲ್ಲದಿದ್ದಲ್ಲಿ ಏನು ಮಾಡುವುದು? | ಅಂತಹವರು ಫಲಾನುಭವಿಗಳಾಗಿ ನೊಂದಾಯಿಸಲ್ಪಡುವರು ಮತ್ತುರೂ. 10/- ಗಳ ಶುಲ್ಕವನ್ನು ಪಾವತಿಸಿ ಕಾರ್ಡು ಪಡೆಯಬಹುದುಹಾಗೂ 'ಅರ್ಹರೋಗಿ' ಗಳು ಚಿಕಿತ್ಸಾ ವಿಧಾನಗಳಿಗೆ ಅರ್ಹರಿರುತ್ತಾರೆ. ಆದರೆ ಸಾರ್ವಜನಿಕಆರೋಗ್ಯ ಕೇಂದ್ರಗಳಿಂದ ರೆಫರ್ ಆಗಿ ನೊಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ಹೋಗುವಾಗ ಕಡ್ಡಾಯವಾಗಿಆಧಾರ್ ಕಾರ್ಡುಗಳನ್ನು ನೀಡುವುದು. ಇಲ್ಲದಿದ್ದಲ್ಲಿಆಧಾರಕಾರ್ಡು ಪಡೆಯಲು ಸಲ್ಲಿಸಿದ ಸ್ವೀಕೃತಿಯನ್ನು ನೀಡುವುದು. |

| ಕ್ರಮಸಂಖ್ಯೆ | ಎಫ್.ಎ.ಕ್ಯೂ. | ಉತ್ತರ |
|---|---|---|
| **10** | ನನ್ನಲ್ಲಿಆಧಾರ್‌ಕಾರ್ಡುಅಥವಾ ಪಿಡಿಎಸ್‌ಕಾರ್ಡುಇಲ್ಲದಿದ್ದಲ್ಲಿ, ನಾನು ಯೋಜನೆಯಡಿ ನೊಂದಾಯಿಸಬಹುದೇ? | ಇಲ್ಲ, ನೀವು ಎರಡೂ ಕಾರ್ಡುಗಳನ್ನು ಹೊಂದಿಲ್ಲದಿದ್ದಲ್ಲಿಯೋಜನೆಯಡಿ ನೊಂದಾಯಿಸಲು ಸಾಧ್ಯವಿಲ್ಲ.ಆದರೆ ಸಾರ್ವಜನಿಕಆರೋಗ್ಯ ಕೇಂದ್ರಗಳ ನಿಯಮ ಹಾಗೂ ಸಾಮಾನ್ಯ ಚಿಕಿತ್ಸೆಗಳ ಪ್ರಕಾರ ಸಾರ್ವಜನಿಕಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯಬಹುದು. |

| | | |
|---|---|---|
| 11 | ಯೋಜನೆಯಲ್ಲಿ ನೊಂದಾಯಿಸಿಕೊಳ್ಳಲು ವಯಸ್ಸಿನ ಮಿತಿಇದೆಯೇ? | ಯೋಜನೆಯಲ್ಲಿ ನೊಂದಾವಣೆಗೆ ವಯಸ್ಸಿನ ಮಿತಿಇರುವುದಿಲ್ಲ. |
| 12 | ಆಧಾರ್ ಹೊಂದಿರದಚಿಕ್ಕ ಮಕ್ಕಳನ್ನು ನೊಂದಾಯಿಸಬಹುದೇ? | 3 ವರ್ಷದೊಳಗಿನ ಮಕ್ಕಳನ್ನು ಅವರತಂದೆ-ತಾಯಿ/ ಪೋಷಕರಆಧಾರ್‌ನೊಂದಿಗೆಯೋಜನೆಯಡಿ ನೊಂದಾವಣೆ ಮಾಡಬಹುದು. |
| 13 | ಯೋಜನೆಯಲ್ಲಿ ನೊಂದಾಯಿಸಿಕೊಳ್ಳಲು ಶುಲ್ಕವಿದೆಯೇ? | ಫಲಾನುಭವಿಗಳು ಒಂದು ಬಾರಿರೂ. 10/-ಗಳನ್ನು ಮಾತ್ರ ಪಾವತಿಸಿ ಆರೋಗ್ಯಕರ್ನಾಟಕಕಾರ್ಡ್ ಪಡೆಯಲುನೊಂದಾಯಿಸಿಕೊಳ್ಳಬಹುದು. |
| 14 | ಆರೋಗ್ಯಕರ್ನಾಟಕಕಾರ್ಡ್ ಕಳೆದು ಹೋದಲ್ಲಿ ನಕಲುಪ್ರತಿ ಪಡೆಯಲುಯಾರನ್ನು ಸಂಪರ್ಕಿಸಬೇಕು ಹಾಗೂ ಹೇಗೆ ಪಡೆಯಬೇಕು? | ಆರೋಗ್ಯಕರ್ನಾಟಕಕಾರ್ಡ್ ಕಳೆದು ಹೋದಲ್ಲಿ ನಕಲು ಪ್ರತಿಯನ್ನು ಪಡೆಯಲು ಹತ್ತಿರದ ಸರ್ಕಾರಿಆಸ್ಪತ್ರೆಯನ್ನು ಸಂಪರ್ಕಿಸಬೇಕು. ರೂ. 20/- ಶುಲ್ಕ ಮಾತ್ರಪಾವತಿಸುವುದರೊಂದಿಗೆ ನಕಲು ಪ್ರತಿಯನ್ನು ನೊಂದಾವಣೆಕೌಂಟರ್‌ನಲ್ಲಿ ಪಡೆಯಬಹುದು. |
| 15 | ಯೋಜನೆಯಡಿಎಫ್.ಎಸ್.ಎ. (ಆಹಾರ ಭದ್ರತಾಕಾಯ್ದೆ) ಅರ್ಹ (ಬಿ.ಪಿ.ಎಲ್.) ಕುಟುಂಬಗಳಿಗೆ ವಿಸ್ತರಿಸಲ್ಪಟ್ಟ ಪ್ರಯೋಜನಗಳೇನು? | ಎಫ್.ಎಸ್.ಎ. ಅರ್ಹ ಕುಟುಂಬಗಳಿಗೆ, 5 ಸದಸ್ಯರವರೆಗೆಇರುವಒಂದುಅರ್ಹತಾಕುಟುಂಬಕ್ಕೆ ಸೂಚಿತ ಸಂಕೀರ್ಣ ದ್ವಿತೀಯ ಹಂತದಆರೋಗ್ಯಚಿಕಿತ್ಸೆಗಾಗಿಒಂದು ವರ್ಷಕ್ಕೆರೂ. 30,000/- ಗಳವರೆಗೆ ಆರ್ಥಿಕ ನೆರವನ್ನು ನೀಡಲಾಗುವುದು.<br>ಯಾವುದೇಅರ್ಹತಾಕುಟುಂಬಕ್ಕೆತೃತೀಯ ಹಂತದಆರೋಗ್ಯಚಿಕಿತ್ಸೆ ಬೇಕಾದಲ್ಲಿ, ಈ ಮಿತಿಯನ್ನುಒಂದು ವರ್ಷಕ್ಕೆ ರೂ.1.50 ಲಕ್ಷಗಳವರೆಗೆ ಒದಗಿಸಲಾಗುವುದು.<br>ಈ ಹೆಚ್ಚಿನ ಮಿತಿಯು ಪೂರ್ಣವಾಗಿಉಪಯೋಗವಾದ ಮೇಲೆ ತೃತೀಯ ಹಂತದತುರ್ತುಚಿಕಿತ್ಸಾ ಸಂದರ್ಭ ಬಂದಲ್ಲಿ, ಇನ್ನೂ ಹೆಚ್ಚಿನರೂ.50,000/- ಗಳ ಆರ್ಥಿಕ ನೆರವನ್ನುಒದಗಿಸಲಾಗುವುದು.<br>ಈ ನೆರವು ಮಂಜೂರಾದ ಪ್ಯಾಕೇಜ್ ದರಗಳಿಗೆ ಒಳಪಟ್ಟಿರುತ್ತದೆ. |

| ಕ್ರಮಸಂಖ್ಯೆ | ಎಫ್.ಎ.ಕ್ಯೂ. | ಉತ್ತರ |
|---|---|---|
| 16 | ಆಹಾರ ಸುರಕ್ಷತೆಕಾಯಿದೆಯಡಿಯಲ್ಲಿಅರ್ಹವಲ್ಲದ ಕುಟುಂಬಗಳಿಗೆ ಪ್ರಯೋಜನವೇನು? | ಆಹಾರ ಸುರಕ್ಷತೆಕಾಯಿದೆಯಡಿಯಲ್ಲಿಅರ್ಹತೆ ಪಡೆಯದ ಫಲಾನುಭವಿಗಳನ್ನು ಈ ಯೋಜನೆಯಡಿ ಸಾಮಾನ್ಯರೋಗಿಎಂದುಕರೆಯಲಾಗಿದೆ.<br>ಸಾಮಾನ್ಯರೋಗಿಗೆಚಿಕಿತ್ಸೆಯು ಸಹ-ಪಾವತಿಆಧಾರದ ಮೇಲೆ ಚಿಕಿತ್ಸೆಗೆ ಆಸ್ಪತ್ರೆಗಳಿಗೆ ಮರುಪಾವತಿ ಮಾಡಲಾಗುವುದು. ಸಾಮಾನ್ಯ ವರ್ಗಗಳ ರೋಗಿಗಳಿಗೆಚಿಕಿತ್ಸಾ ವೆಚ್ಚದ ಮರುಪಾವತಿಯನ್ನು ಪ್ಯಾಕೇಜ್ ದರಗಳ ವೆಚ್ಚದಅಥವಾಚಿಕಿತ್ಸೆಯ ನೈಜ ವೆಚ್ಚಗಳ ಪೈಕಿ ಯಾವುದುಕಡಿಮೆಇರುತ್ತದೋಅದರ ಶೇ.30% ಕ್ಕೆ ಮಿತಿಗೊಳಿಸಲಾಗಿದೆ. ಇನ್ನುಳಿದ ಶೇ.70%ರಷ್ಟು ವೆಚ್ಚವನ್ನುರೋಗಿಯೇ ಭರಿಸಬೇಕಾಗುತ್ತದೆ.<br>ಈ ನೆರವುಎಫ್.ಎ.ಕ್ಯೂ. 15 ಗಾಗಿ ಸೂಚಿಸಲಾದಕುಟುಂಬದ |

| | | |
|---|---|---|
| | | ಮಿತಿಗೆ ಒಳಪಟ್ಟಿರುತ್ತದೆ. |
| 17 | ಯೋಜನೆಯಲ್ಲಿಎಲ್ಲರಿಗೂಆರೋಗ್ಯರಕ್ಷಣೆದೊರೆಯುವುದೇ? | ಈಗಾಗಲೇ ಸರ್ಕಾರಿಆರೋಗ್ಯ ವಿಮೆ / ಇತರೇ ಯೋಜನೆಗಳಡಿ ನೊಂದಾವಣೆಗೊಂಡ ಸದಸ್ಯರು(ಉ: ಸಿ.ಜಿ.ಹೆಚ್.ಎಸ್., ಇ.ಎಸ್.ಐ., ರಾಜ್ಯ ಸರ್ಕಾರಿ ಮರು ಪಾವತಿಯೋಜನೆ, ಚುನಾಯಿತಶಾಸನ / ಸಂಸದೀಯ ಸದಸ್ಯರು, ಜ್ಯೋತಿ ಸಂಜೀವಿನಿ, ಪೋಲೀಸ್ಆರೋಗ್ಯ ಭಾಗ್ಯ) ಹಾಗೂ ಖಾಸಗಿ ಆರೋಗ್ಯ ವಿಮೆಯಲ್ಲಿ ನೊಂದಾಯಿಸಿಕೊಂಡಿರುವವರನ್ನು ಈ ಯೋಜನೆಯಿಂದ ಹೊರತುಪಡಿಸಲಾಗಿದೆ. |
| 18 | ಕುಟುಂಬದ ಎಷ್ಟು ಸದಸ್ಯರುಯೋಜನೆಯಲ್ಲಿ ನೊಂದಾಯಿಸಿಕೊಳ್ಳಬಹುದು? | ಯೋಜನೆಯಲ್ಲಿಕುಟುಂಬ ಸದಸ್ಯರ ನೊಂದಾವಣೆಗೆ ಸಂಖ್ಯೆಯ ಮಿತಿಇರುವುದಿಲ್ಲ. ಆದರೆ, ವಾರ್ಷಿಕಕುಟುಂಬದ 5 ಸದಸ್ಯರಿಗೆ ಮಾತ್ರಯೋಜನೆಯ ಸೌಲಭ್ಯಗಳನ್ನು ಪಡೆಯಬಹುದು. ಉಳಿದ ಸದಸ್ಯರು ಸರ್ಕಾರಿ ಆಸ್ಪತ್ರೆಗಳಲ್ಲಿ ಸಾಮಾನ್ಯ ವರ್ಗದ ನಿಯಮಗಳಂತೆ ಚಿಕಿತ್ಸೆ ಪಡೆಯಬಹುದಾಗಿದೆ. |
| 19 | ಯೋಜನೆಯಡಿಯಲ್ಲಿಯಾವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ? | ಯೋಜನೆಯ ಮಾರ್ಗಸೂಚಿಗಳಿಗನುಗುಣವಾಗಿ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗು ನೊಂದಾವಣೆಗೊಂಡ ಖಾಸಗಿ ಆಸ್ಪತ್ರೆಗಳಲ್ಲಿ ರೆಫರಲ್ ಮೂಲಕ ಫಲಾನುಭವಿಗಳು ಚಿಕಿತ್ಸೆ ಪಡೆಯಬಹುದು. |
| 20 | ಯೋಜನೆಯಡಿಚಿಕಿತ್ಸಾ ಮೊತ್ತವು ವಾರ್ಷಿಕ ಮಿತಿಯನ್ನು ಮೀರಿದ ಸಂದರ್ಭದಲ್ಲಿಯೋಜನೆಯುರಕ್ಷಣೆಕಲ್ಪಿಸುವುದೇ? | ಚಿಕಿತ್ಸಾ ವೆಚ್ಚವು ವಾರ್ಷಿಕ ಮಿತಿರೂ. 1,50,000/- ಗಳು ಮೀರಿದ ಸಂದರ್ಭದಲ್ಲಿ ಪ್ರತಿಕುಟುಂಬಕ್ಕೆ, ವಿಶೇಷ ಪ್ರಕರಣಗಳಲ್ಲಿ ಹೆಚ್ಚುವರಿ ವಾರ್ಷಿಕರೂ. 50,000/- ಮೊತ್ತವನ್ನುತೃತೀಯ ಹಂತದಚಿಕಿತ್ಸೆಗಾಗಿಯೋಜನೆಯಡಿಯಲ್ಲಿ ನೀಡಲಾಗುವುದು. |
| ಕ್ರಮಸಂಖ್ಯೆ | ಎಫ್.ಎ.ಕ್ಯೂ. | ಉತ್ತರ |
| 21 | ಒಂದು ವೇಳೆ ಚಿಕಿತ್ಸೆ ವೆಚ್ಚವು ಮಿತಿ ಮೀರಿದಾಗಯೋಜನೆಯು ಭರಿಸುತ್ತದೆಯೇ | ಇಲ್ಲ. ಅವರುಅರ್ಹರೋಗಿಅಥವಾ ಸಾಮಾನ್ಯರೋಗಿಯಾರೇಆಗಿರಲಿ ಅವರೇ ಹೆಚ್ಚಿನಚಿಕಿತ್ಸಾ ವೆಚ್ಚವನ್ನು ಭರಿಸುವುದು. |
| 22 | ಸಾಮಾನ್ಯ (ಎಪಿಎಲ್) ಕುಟುಂಬಗಳಿಗೆ ಯೋಜನೆಯಲ್ಲಿಉಚಿತಚಿಕಿತ್ಸೆ ಸಿಗುವುದೇ? | ಇಲ್ಲ, ಯೋಜನೆಯಡಿಯಲ್ಲಿ ಸಾಮಾನ್ಯ (ಎಪಿಎಲ್) ಫಲಾನುಭವಿಗಳು ಸಹ-ಪಾವತಿಯಆಧಾರದ ಮೇಲೆ ಚಿಕಿತ್ಸೆದೊರೆಯಲಿದೆ. ಸರ್ಕಾರವುಪ್ಯಾಕೇಜ್ ವೆಚ್ಚದ ಶೇಕಡ 30% ರಷ್ಟುಅಥವಾ ಶೇ 30% ರಷ್ಟು ನೈಜ ವೆಚ್ಚ, ಇದರಲ್ಲಿಯಾವುದುಕಡಿಮೆಅದನ್ನು ಸರ್ಕಾರವು ಭರಿಸಲಿದ್ದು ಉಳಿದ ಶೇ.70% ರಷ್ಟನ್ನು ಫಲಾನುಭವಿಗಳು ಭರಿಸುವುದು. |
| 23 | ಯೋಜನೆಯಡಿಯಲ್ಲಿ ವಾರ್ಡ್ಅರ್ಹತೆ ಏನು? | ಫಲಾನುಭವಿಗಳು ಯೋಜನೆಯಡಿಯಲ್ಲಿ ಸಾಮಾನ್ಯ ವಾರ್ಡ್‌ನಲ್ಲಿಚಿಕಿತ್ಸೆ ಪಡೆಯಬಹುದಾಗಿದೆ. |
| 24 | ಸಾರ್ವಜನಿಕಆರೋಗ್ಯ ಕೇಂದ್ರಗಳಲ್ಲಿ ಶುಲ್ಕವನ್ನು ಪಾವತಿಸಬೇಕೇ? | ಸಾರ್ವಜನಿಕಆರೋಗ್ಯ ಕೇಂದ್ರಗಳಲ್ಲಿ ನಿಗದಿಪಡಿಸಿದ ಬಳಕೆದಾರರ ವೆಚ್ಚವನ್ನು ಪಾವತಿಸಿ ಪ್ರಾಥಮಿಕ ಮತ್ತು ಸಾಮಾನ್ಯ ದ್ವಿತೀಯ ಹಂತದ ಚಿಕಿತ್ಸೆಗಳನ್ನು ಪಡೆಯುವುದು. |
| 25 | ನಾನು ಖಾಸಗಿ ಆಸ್ಪತ್ರೆಗಳಿಗೆ ನೇರವಾಗಿ ಹೋಗಬಹುದೇ ಹಾಗೂ | ಇಲ್ಲ. ಸಾರ್ವಜನಿಕಆರೋಗ್ಯ ಕೇಂದ್ರಗಳ ವೈದ್ಯರಿಂದನೊಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ರೆಫರ್ಆಗಿರಲೇಬೇಕು. ಒಂದು ವೇಳೆ |

| | | |
|---|---|---|
| | ಆರೋಗ್ಯಕರ್ನಾಟಕಯೋಜನೆಯ ಸೌಲಭ್ಯವನ್ನು ಪಡೆಯಬಹುದೆ? | ರೆಫರ್ ಆಗದೇಚಿಕಿತ್ಸೆ ಹೊಂದಿದ್ದರೆ,ಅಂತಹ ಫಲಾನುಭವಿಗಳು ಯೋಜನೆಯ ಪ್ರಯೋಜನವನ್ನು ಪಡೆಯಲುಅರ್ಹರಿರುವುದಿಲ್ಲ ಹಾಗೂ ಚಿಕಿತ್ಸೆಯ ವೆಚ್ಚವನ್ನುಅವರೇ ಪಾವತಿಸಬೇಕಾಗುವುದು. |
| **26** | ಯಾವುದೇಚಿಕಿತ್ಸೆಗಾಗಿ ನಾನು ಸಾರ್ವಜನಿಕಆರೋಗ್ಯ ಕೇಂದ್ರಗಳಲ್ಲಿ ರೆಫರ್ ಪಡೆಯಬಹುದೇ? | ರೋಗಿಗಳಿಗೆ ಸಂಕೀರ್ಣ ದ್ವಿತೀಯ ಹಂತದಚಿಕಿತ್ಸೆಯಅವಶ್ಯವಿದ್ದಲ್ಲಿ ಮಾತ್ರಅಥವಾತೃತೀಯ ಹಂತದ ಚಿಕಿತ್ಸೆಗಳು ಸಾರ್ವಜನಿಕಆರೋಗ್ಯ ಕೇಂದ್ರಗಳಲ್ಲಿ ಲಭ್ಯವಿಲ್ಲದಿದ್ದಲ್ಲಿ, ಅಂತಹಚಿಕಿತ್ಸೆ ಪಡೆಯಲು ನೊಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ರೆಫರ್ ಮಾಡಲಾಗುವುದು. |
| **27** | ನಾನು ಸಾರ್ವಜನಿಕಆರೋಗ್ಯ ಕೇಂದ್ರಗಳಿಂದ ರೆಫೆರ್ ಆದ ಆಸ್ಪತ್ರೆಗಳಲ್ಲಿ ಮಾತ್ರಚಿಕಿತ್ಸೆ ಪಡೆಯಬೇಕೇ? | ನಿಮಗೆ ಚಿಕಿತ್ಸೆ ನೀಡುವ ಸಾಮರ್ಥ್ಯವುಳ್ಳ ನೊಂದಾಯಿತ ಖಾಸಗಿ ಆಸ್ಪತ್ರೆಗಳ ವಿವರವನ್ನು ಸಾರ್ವಜನಿಕಆರೋಗ್ಯ ಕೇಂದ್ರಗಳಿಂದ ರೆಫರ್ ಮಾಡಲಾಗುತ್ತದೆ. ತಮ್ಮಆಯ್ಕೆಗೆಅನುಗುಣವಾಗಿ ನೀವು ಚಿಕಿತ್ಸೆ ಪಡೆಯಬೇಕಾದಆಸ್ಪತ್ರೆಯನ್ನುತಾವೇಆಯ್ಕೆ ಮಾಡಬಹುದು. |
| ಕ್ರಮಸಂಖ್ಯೆ | ಎಫ್.ಎ.ಕ್ಯೂ. | ಉತ್ತರ |
| **28** | ಆಸ್ಪತ್ರೆಯ ಸಾಮರ್ಥ್ಯವನ್ನು ನಾನು ಹೇಗೆ ತಿಳಿಯುವುದು? | ಹಾಸಿಗೆ, ಐಸಿಯು ಮತ್ತುತಜ್ಞ ವೈದ್ಯರ ಲಭ್ಯತೆ ಬಗ್ಗೆ ಮಾಹಿತಿಯುwww.sast.gov.in&www.karnataka.gov.in/hfwವೆಬ್ ಸೈಟ್ ನಲ್ಲಿ ಲಭ್ಯವಿರುತ್ತದೆ. ಈ ಮೂಲಕ ತಮ್ಮಆಯ್ಕೆಗೆಅನುಗುಣವಾಗಿ ಆಸ್ಪತ್ರೆಗಳನ್ನು ನಿರ್ಧರಿಸಬಹುದು. |
| **29** | ಯಶಸ್ವಿನಿ ಯೋಜನೆಯ ಮುಂದುವರೆಯುವುದೆ? | ಯಶಸ್ವಿನಿ ಯೋಜನೆಯು ದಿನಾಂಕ: **31/5/2018** ರವರೆಗೆ ಮುಂದುವರೆಯುವುದು.ತದನಂತರ, ಸದಸ್ಯರುಗಳು ಚಿಕಿತ್ಸೆಯಅವಶ್ಯಕತೆಇದ್ದಲ್ಲಿ, ಆರೋಗ್ಯಕರ್ನಾಟಕಯೋಜನೆಯಲ್ಲಿ ನೊಂದಾಯಿಸಿಕೊಳ್ಳಬಹುದು. |
| **30** | ವಾಜಪೇಯಿ ಆರೋಗ್ಯಶ್ರೀ ಯೋಜನೆಯು ಮುಂದುವರೆಯುವುದೇ? | ವಾಜಪೇಯಿ ಆರೋಗ್ಯಶ್ರೀ ಯೋಜನೆಯು ಸಾರ್ವತ್ರಿಕಆರೋಗ್ಯರಕ್ಷಣೆಯೋಜನೆಯಡಿಯಲ್ಲಿ ಸೇರ್ಪಡೆಗೊಂಡಿದೆ. ಆದರೂಅವರು ದಿನಾಂಕ: **31/5/018** ರವರೆಗೆಎಸ್.ಎ.ಎಸ್.ಟಿ ಅಡಿ ನೊಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ತೃತೀಯ ಹಂತದಚಿಕಿತ್ಸೆ ಪಡೆಯಲು ಮುಕ್ತ ಅವಕಾಶವಿರುತ್ತದೆ.<br><br>ಆದಾಗ್ಯೂಅವರು ಖಾಸಗಿ ಆಸ್ಪತ್ರೆಗಳಿಗೆ ಹೋಗುವ ಮೊದಲು ಸಾರ್ವಜನಿಕಆರೋಗ್ಯ ಸಂಸ್ಥೆಗಳಲ್ಲಿ ನೊಂದಾವಣೆ ಮಾಡಿಕೊಳ್ಳುವುದು.<br><br>ದಿನಾಂಕ: **1-6-2018** ರಿಂದಯಾವುದಾದರೂ ಖಾಸಗೀ ಆಸ್ಪತ್ರೆಯಲ್ಲಿಚಿಕಿತ್ಸೆ ಪಡೆಯಲು ಸಾರ್ವಜನಿಕಆರೋಗ್ಯ ಸಂಸ್ಥೆಯಿಂದರೆಫರಲ್ ಆಗಿರಬೇಕು. |